# ರೈಲು ನಿಲ್ದಾಣ ನಿರ್ವಹಣೆ ಮಾಹಿತಿ



ಅಳ್ನಾವರ: ಪ್ರಾಯೋಗಿಕ ಜ್ಞಾನದ ತಿಳಿವಳಿಕೆ ಹಾಗೂ ಅಧ್ಯಯನ ಪ್ರವಾಸಕ್ಕಾಗಿ ಸಮೀಪದ ಹಳಿಯಾಳದ ಕೆಎಲ್‌ಎಸ್ ಸಂಸ್ಥೆಯ ವಿಶ್ವನಾಥರಾವ ದೇಶಪಾಂಡೆ ತಾಂತ್ರಿಕ ಮಹಾವಿದ್ಯಾಲಯದ ಎಂಜಿನಿಯರಿಂಗ್ ಕಾಲೇಜಿನ ಸಿವಿಲ್ ವಿಭಾಗದ ವಿದ್ಯಾರ್ಥಿಗಳು ಇಲ್ಲಿನ ರೈಲು ನಿಲ್ದಾಣಕ್ಕೆ ಭೇಟಿ ನೀಡಿದ್ದರು. ಪ್ರಜಾವಾಣಿ ವಾರ್ತೆ

ಮೂರನೇ ಸೆಮಿಸ್ಟರ್ ನ 45 ವಿದ್ಯಾರ್ಥಿಗಳು ಪ್ರೊ. ಹರ್ಷ ಜಾಧವ ಹಾಗೂ ಪ್ರೊ. ಹರ್ಷವರ್ಧನ ಅವರೊಂದಿಗೆ ಭೇಟಿ ನೀಡಿ, ರೈಲು ಹಳಿಗಳ ಮೇಲೆ ಸಂಚಾರದ ಕುರಿತು ತಿಳಿವಳಿಕೆ, ನ್ಯಾರೋ ಗೇಜ್, ಬ್ರಾಡ್ ಗೇಜ್ ಹಾಗೂ ರೈಲು ಸಂಚಾರ ದಟ್ಟಣೆ ನಿರ್ವಹಣೆ ಕುರಿತು ಮಾಹಿತಿ ಪಡೆದರು.

ರೈಲು ನಿಲ್ದಾಣದ ಅಧಿಕಾರಿ ಗೋಪಾಲ ಮಾತನಾಡಿ, ರೈಲು ಮಾರ್ಗ ನಿರ್ಮಾಣ, ಮಾರ್ಗ ನಿರ್ವಹಣೆ ಹಾಗೂ ಲೋಪ ದೋಷಗಳ ಪರಿಹರಿಸುವ ಕುರಿತು ಸಮಗ್ರ ಮಾಹಿತಿ ನೀಡಿದರು.

ವಿದ್ಯಾರ್ಥಿಗಳಿಗೆ ಭಾರತೀಯ ರೈಲು ಸೇವೆ ಕಾರ್ಯ ನಿರ್ವಹಿಸುವ ವಿಧಾನ ತಿಳಿದುಕೊಳ್ಳಲು ಈ ಕಾರ್ಯಕ್ರಮ ಸಹಕಾರಿಯಾಗಿದೆ ಎಂದು ಪ್ರಾಚಾರ್ಯ ಡಾ.ವಿ.ಎ.ಕುಲಕರ್ಣಿ ಹೇಳಿದರು. ಸಿವಿಲ್ ವಿಭಾಗದ ಮುಖ್ಯಸ್ಥ ಡಾ.ಅಶಿಕ್ ಬಳ್ಳಾರಿ ವಿದ್ಯಾರ್ಥಿಗಳಿಗೆ ಪ್ರಾಯೋಗಿಕ ಜ್ಞಾನ ನೀಡುವ ಉದ್ದೇಶದಿಂದ ಈ ಕಾರ್ಯಕ್ರಮ ಸಂಯೋಜಿಸಿದ್ದರು.

# ರೈಲು ನಿಲ್ದಾಣಕ್ಕೆ ವಿಡಿಐಟಿ ವಿದ್ಯಾರ್ಥಿಗಳ ಭೇಟಿ

**ಹಳಿಯಾಳ:** ಪ್ರಾಯೋಗಿಕ ಜ್ಞಾನದ ಉನ್ನತೀಕರಣಕ್ಕಾಗಿ ಕೆಎಲ್‌ಎಸ್ ವಿಡಿಐಟಿ ಮಹಾವಿದ್ಯಾಲಯ ಹಳಿಯಾಳದ ಸಿವಿಲ್ ವಿಭಾಗದ ವಿದ್ಯಾರ್ಥಿಗಳು ಅಳ್ನಾವರದ ರೈಲು ನಿಲ್ದಾಣಕ್ಕೆ ಭೇಟಿ ನೀಡಿದರು.

ಸಿವಿಲ್ ವಿಭಾಗದ ಮೂರನೇ ವರ್ಷದ 45 ವಿದ್ಯಾರ್ಥಿಗಳು ಪ್ರೊ. ಹರ್ಷ ಜಾಧವ್ ಹಾಗೂ ಪ್ರೊ. ಹರ್ಷವರ್ಧನ್ ಅವರೊಂದಿಗೆ ಇತ್ತೀಚೆಗೆ ಅಳ್ನಾವರ ರೈಲು ನಿಲ್ದಾಣಕ್ಕೆ ಭೇಟಿ ನೀಡಿದ್ದರು. ರೈಲು ನಿಲ್ದಾಣದಮುಖ್ಯ ಅಧಿಕಾರಿ ಗೋಪಾಲ್, ರೈಲು ಮಾರ್ಗ ನಿರ್ಮಾಣ, ಮಾರ್ಗ ನಿರ್ವಹಣೆ ಹಾಗೂ ಲೋಪ ದೋಷಗಳ ಪರಿಹರಿಸುವ ಕುರಿತು ಮಾಹಿತಿ ನೀಡಿದರು. ನ್ಯಾರೋ ಗೇಜ್, ಬ್ರಾಡ್ ಗೇಜ್ ಹಾಗೂ ರೈಲು ಸಂಚಾರದ ದಟ್ಟಣೆಯನ್ನು ನಿರ್ವಹಿಸುವ ವ್ಯವಸ್ಥೆಯನ್ನು ವಿವರಿಸಿದರು. ಸಿವಿಲ್ ವಿಭಾಗದ ಮುಖ್ಯಸ್ಥ ಡಾ. ಆಶಿಕ್ ಬಳ್ಳಾರಿ ಈ ಕಾರ್ಯಕ್ರಮವನ್ನು ಸಂಯೋಜಿಸಿದ್ದರು. ವಿದ್ಯಾರ್ಥಿಗಳಿಗೆ ಭಾರತೀಯ ರೈಲು ಸೇವೆ ಕಾರ್ಯನಿರ್ವಹಿಸುವ ವಿಧಾನವನ್ನು ತಿಳಿದುಕೊಳ್ಳಲು ಈ ಕಾರ್ಯಕ್ರಮ ಸಹಕಾರಿಯಾಗಿದೆ ಎಂದು ಪ್ರಾಚಾರ್ಯ ಡಾ. ವಿ. ಎ. ಕುಲಕರ್ಣಿ ತಿಳಿಸಿದ್ದಾರೆ.

